

# ‘ಅಮ್ಮನ ಮೇಕಪ್’ ಅರ್ಚನಾ ಪ್ಯಾಕಪ್

ಭರತನಾಟ್ಯ ಕಲಾವಿದೆಯಾಗಿದ್ದ ಅರ್ಚನಾ ಜೋಯಿಸ್, ಸಿನಿಮಾ ಹಾದಿಗೆ ಹೊರಳಿದ್ದು ಅನಿರೀಕ್ಷಿತವಾಗಿ. ಕಿರುತೆರೆಯಿಂದ ಚಿತ್ರರಂಗಕ್ಕೆ ಬಂದ ಅವರಲ್ಲಿ, ತಮ್ಮನ್ನು ಉತ್ತಮ ಕಲಾವಿದೆಯಾಗಿ ರೂಪಿಸಿಕೊಳ್ಳಲು ಅನುವಾಗುವಂಥ ಪಾತ್ರಗಳಲ್ಲಿ ತೊಡಗಿಕೊಳ್ಳುವ ಅಪೇಕ್ಷೆ.

**■ ಸುಮಲತಾ ಎನ್.**

ಭರತನಾಟ್ಯ ಕಲಾವಿದೆಯಾಗಿದ್ದ ನಟಿ ಅರ್ಚನಾ ಜೋಯಿಸ್ ಅವರಿಗೆ ಧಾರಾವಾಹಿ, ಸಿನಿಮಾರಂಗಕ್ಕೆ ಬರಬೇಕೆಂಬ ಉದ್ದೇಶ ಇರದಿದ್ದರೂ ತಾನಾಗೇ ಒಲಿದುಬಂದ ಅವಕಾಶವನ್ನು ಕೈಚೆಲ್ಲಲು ಇಷ್ಟಪಟ್ಟವರಲ್ಲ. ‘ಮಹಾದೇವಿ’ ಧಾರಾವಾಹಿ ಮೂಲಕ ಕಿರುತೆರೆಗೆ ಬಂದ ಅವರಿಗೆ ಮತ್ತಷ್ಟು ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳುವ ಅವಕಾಶಗಳು ಒಂದಾದ ನಂತರ ಒಂದರಂತೆ ಸಿಕ್ಕವು. ಆ ಅವಕಾಶಗಳು ಸಿನಿಮಾರಂಗದ ಪರಿಚಯವನ್ನೂ ಮಾಡಿಕೊಟ್ಟವು.

ಕೆಲವು ಸಿನಿಮಾಗಳಲ್ಲಿ ನಟಿಸಿದ ಅವರಿಗೆ ಜನಪ್ರಿಯತೆ ತಂದುಕೊಟ್ಟದ್ದು ‘ಕೆಜಿಎಫ್’ ಸಿನಿಮಾ. ನಟ ಯಶ್ ತಾಯಿ ಪಾತ್ರಕ್ಕೆ ಬಣ್ಣ ಹಚ್ಚಿದ ಅವರಿಗೆ ಅಪಾರ ಮೆಚ್ಚುಗೆ ಸಿಕ್ಕಿತು. ಆ ಮೆಚ್ಚುಗೆಯನ್ನೇ ಬೆನ್ನಿಗಿಟ್ಟುಕೊಂಡು ಭಿನ್ನ ಪಾತ್ರಗಳಲ್ಲಿ ತಮ್ಮನ್ನು ಬಿಂಬಿಸಿಕೊಳ್ಳುವ ಪ್ರಯತ್ನದಲ್ಲಿರುವ ಅವರು, ಕನ್ನಡದ ‘ಘೋಸ್ಟ್’, ‘ಯುದ್ಧಕಾಂಡ’ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಇದೇ ಸಂದರ್ಭ, ಸಿನಿಮಾರಂಗದಲ್ಲಿ ತಮಗಿರುವ ನಿರೀಕ್ಷೆಗಳ ಕುರಿತು ‘ಸುಧಾ’ ಜೊತೆ ಮಾತನಾಡಿದ್ದಾರೆ.

“ಸಿನಿಮಾರಂಗದಲ್ಲಿ ಒಮ್ಮೆ ಒಂದು ಪಾತ್ರದಿಂದ ಗುರುತಿಸಿಕೊಂಡರೆ, ಅದೇ ರೀತಿಯ ಪಾತ್ರಗಳೇ ಮತ್ತೆ ಮತ್ತೆ ಬರುತ್ತಿರುತ್ತವೆ. ಏಕತಾನತೆಯ ಪಾತ್ರಗಳಿಗೆ ಜೋತು ಬೀಳುವುದು ಕಲಾವಿದರಿಗೆ ಥರವಲ್ಲ. ಒಂದು ದೊಡ್ಡ ಸಿನಿಮಾ ಮಾಡಿದಾಗ, ಅದರಿಂದ ಜನಪ್ರಿಯತೆ ಸಿಗುವುದು ವರ ಹೌದಾದರೂ, ಅದರ ಪರಿಣಾಮ ಬೇರೆ ರೀತಿ ಇರುತ್ತದೆ. ಜನರು ನಮ್ಮನ್ನು ಬೇರೆ ಪಾತ್ರಗಳಲ್ಲಿ ನೋಡಲು ತಯಾರಿರುವುದಿಲ್ಲ. ನಿರ್ದೇಶಕರು ಕೂಡ ಅದೇ ರೀತಿಯ ಪಾತ್ರಗಳಿಗೆ ನಮ್ಮನ್ನು ಫಿಕ್ಸ್ ಮಾಡುತ್ತಾರೆ. ಇದು ದೊಡ್ಡ ಸವಾಲು. ಹಾಗೇ ‘ಮದರ್ ಇಮೇಜ್’ನಿಂದ ನನ್ನನ್ನು ಸಂಪೂರ್ಣ ಹೊರತರುವ ಪಾತ್ರಗಳ ಹುಡುಕಾಟದಲ್ಲಿದ್ದೇನೆ” ಎಂದು ಹೇಳುತ್ತಾರೆ ಅರ್ಚನಾ.

ಈ ಸವಾಲಿನಲ್ಲಿ ಕೊಂಚ ಮಟ್ಟಿಗೆ ತಾವು ಗೆಲುವನ್ನೂ ಪಡೆದಿರುವುದಾಗಿ ಹೇಳುವ ಅವರು, ಈ ವರ್ಷ ಬಿಡುಗಡೆಯಾದ ‘ಹೊಂದಿಸಿ ಬರೆಯಿರಿ’, ‘ಕ್ಷೇತ್ರಪತಿ’ ಸಿನಿಮಾಗಳು ಅದಕ್ಕೆ ಸಹಾಯ ಮಾಡಿವೆ ಎನ್ನುತ್ತಾರೆ.

‘ನನ್ನನ್ನು ನಾನು ಸವಾಲಿಗೆ ಒಡ್ಡಿಕೊಳ್ಳುವಂಥ ಪಾತ್ರ ನನ್ನ ನೆಚ್ಚಿನ ಆಯ್ಕೆ’ ಎನ್ನುವುದು ಅವರ ವಿವರಣೆ. ಕ್ರೀಡೆ, ನೃತ್ಯಾಧಾರಿತ ಸಿನಿಮಾಗಳಲ್ಲಿ ಕೂಡ ಕಾಣಿಸಿಕೊಳ್ಳುವ ಬಯಕೆ ಅರ್ಚನಾ ಅವರದ್ದು. ‘ಸಿನಿಮಾ ಅವಕಾಶವೊಂದು ಬಂದರೆ, ಅದರಲ್ಲಿ ಮೊದಲು ಕಥೆಯನ್ನು ಗಮನಿಸುತ್ತೇನೆ. ನನ್ನ ಪಾತ್ರ ಹಾಗೂ ಆ ಸಿನಿಮಾಗೆ ನನ್ನ ಪಾತ್ರದ ಕೊಡುಗೆ ಏನು, ಸಿನಿಮಾ ಬೆಳೆಯಲು ನನ್ನ ಪಾತ್ರ ಹೇಗೆ ಪೂರಕವಾಗಬಲ್ಲದು ಎಂದು ನೋಡುತ್ತೇನೆ. ಎಲ್ಲಾ ಸಿನಿಮಾದಲ್ಲಿಯೂ ಪರ್ಫಾರ್ಮೆನ್ಸ್ ಹೆಚ್ಚು ಇರಲೇಬೇಕು ಎಂದು ನಿರೀಕ್ಷೆ ಮಾಡುವುದು ಕಷ್ಟ. ನಿರ್ದೇಶಕ ಹಾಗೂ ಪ್ರೊಡಕ್ಷನ್ ಹೌಸ್ ಕೂಡ ಕಲಾವಿದರಿಗೆ ತುಂಬಾ ಮುಖ್ಯ’ ಎಂದು ಹೇಳುತ್ತಾರೆ.

ತಮ್ಮ ಕಿರುತೆರೆಯ ಅನುಭವಗಳನ್ನು ಮೆಲುಕು ಹಾಕಿದ ಅವರು, ‘ಭರತನಾಟ್ಯ ಕಲಾವಿದೆಯಾಗಿ, ನೃತ್ಯಕಲೆಯಲ್ಲೇ ತೊಡಗಿಕೊಳ್ಳಬೇಕು ಎಂದುಕೊಂಡಿದ್ದೆ. ಅದಕ್ಕಾಗಿಯೇ, ಕೊರಿಯೊಗ್ರಫಿ ವಿಷಯದಲ್ಲಿ ಪದವಿ ಮಾಡಿ, ಭರತನಾಟ್ಯ ವಿಷಯದಲ್ಲಿ ಫೈನ್ ಆರ್ಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದೆ. ಆನಂತರ ಕಿರುತೆರೆಗೆ ಬಂದೆ. ಇಂದು ಇಲ್ಲಿಯವರೆಗೂ ಬಂದಿರುವುದಕ್ಕೆ ಖುಷಿ ಎನಿಸುತ್ತದೆ. ಇದು ನನ್ನೊಬ್ಬಳ ದಾರಿ ಎಂದು ಅನ್ನಿಸುವುದಿಲ್ಲ. ನನ್ನ ಕನಸಾಗಿ ಇಲ್ಲಿಗೆ ನಾನು ಬಂದವಳಲ್ಲ. ಕೆಲವು ಸನ್ನಿವೇಶಗಳು ಅಚಾನಕ್ಕಾಗಿ ಆದವು. ಸುಮಾರು ಜನರ ಕೊಡುಗೆ ಇದರಲ್ಲಿದೆ’ ಎಂದು ನೆನಪಿಸಿಕೊಳ್ಳುತ್ತಾರೆ.

ಇದೇ ಅಕ್ಟೋಬರ್ 19ಕ್ಕೆ ಬಿಡುಗಡೆಯಾಗುತ್ತಿರುವ, ಶಿವರಾಜಕುಮಾರ್ ಅಭಿನಯದ ‘ಘೋಸ್ಟ್’ ಚಿತ್ರದಲ್ಲಿ ಪತ್ರಕರ್ತೆಯಾಗಿ ಅರ್ಚನಾ ಕಾಣಿಸಿಕೊಳ್ಳುತ್ತಿದ್ದಾರೆ. ಈ ತಿಂಗಳಲ್ಲಿ ಅವರ ಅಭಿನಯದ ತೆಲುಗು ವೆಬ್‌ಸೀರೀಸ್ ‘ಮ್ಯಾನ್ಷನ್ 24’ ಕೂಡ ಬಿಡುಗಡೆಯಾಗುತ್ತಿದೆ. ‘ಯುದ್ಧಕಾಂಡ’ ಸಿನಿಮಾ ಚಿತ್ರೀಕರಣ ಮುಗಿದಿದ್ದು, ಬಿಡುಗಡೆಯ ಸಿದ್ಧತೆ ನಡೆಯುತ್ತಿದೆ. ■